

# ದೇಶಪ್ರೇಮ ಪಾನಕಕ್ಕೆ ಭಾವುಕತೆಯ ಸಕ್ಕರೆ

**ದೇಶಪ್ರೇಮವನ್ನು, ಆದರದ್ದೇ ಇನ್ನೊಂದು ಮುಖವಾದ ಸೈನಿಕರ ಸಂಸಾರ ವಿರಹದ ಎಳೆಯನ್ನು ಇಟ್ಟುಕೊಂಡು ಈಗಾಗಲೇ ಹಲವು ಚಲನಚಿತ್ರಗಳು ಬಂದಿದೆ. ಅದೇ ದಾರಿಯಲ್ಲಿ ಸಾಗುವ ಇನ್ನೊಂದು ಪ್ರಯತ್ನ ಇದು.**

■ ಗೌರಿ

‘ಗಡಿಯಲ್ಲಿ ಕೆಲಸ ಮಾಡುತ್ತಿರುವ ಗಂಡ, ಊರ ಗುಡಿಸಲಿನಲ್ಲಿ ಅವನಿಗಾಗಿ ಕಾಯುತ್ತ, ಅವನ ಪತ್ರಗಳನ್ನೇ ಅವನೆಂಬಂತೆ ಕನವರಿಸುತ್ತ ದಿನದೂಡುತ್ತಿರುವ ಹೆಂಡತಿ’. ಇದು ಹತ್ತು ಹಲವು ಸಿನಿಮಾಗಳಿಗೆ ವಸ್ತುವಾಗಿರುವ ವಿಷಯ. ಆದರೆ ಕೆಲವು ವಿಷಯಗಳೇ ಹಾಗೆ, ಅದು ಹಳಸುವುದಿಲ್ಲ. ಹೊಸದೇನೂ ಹೇಳದಿದ್ದರೂ ಪರವಾಗಿಲ್ಲ, ಅದೇ ಹಳೆಯ ಭಾವುಕ ಪಾನಕವನ್ನು ಮತ್ತೆ ಮತ್ತೆ ಕುಡಿದು ಕ್ಷಣಕಾಲ ಗುಂಗಾಗುವುದನ್ನು ಜನರು ಇಷ್ಟಪಡುತ್ತಾರೆ. ಪ್ರತಿದಿನವೂ ಅದೇ ರೀತಿ ಪೂಜೆ ಮಾಡಿದರೂ ದಿನವೂ ದೇಗುಲಕ್ಕೆ ಬಂದು ಅದನ್ನೇ ಹೊಸದೆಂಬಂತೆ ನೋಡುವ, ಆರಾಧಿಸುವ, ಪುಳಕಗೊಳ್ಳುವ ಅಸಂಖ್ಯಾತ ಜನರಿರುತ್ತಾರಲ್ಲವೇ?

ಹೀಗೆ ಬಳಸಿ ಬಳಸಿ ಸವಕಲಾದರೂ ಮಾರಾಟವಾಗುವ ಸರಕು ಎಂದು ಗೊತ್ತಿದ್ದೇ ರೂಪಿಸಿದ ಕಿರುಚಿತ್ರ ‘ಮೇರಿ ಪ್ರೀತು’.

ಇದರ ಕಥನ ವಿನ್ಯಾಸ ಹೊಸದೇನಲ್ಲ. ಹಲವು ಸಲ ನೋಡಿರುವುದೇ. ಗಂಡ ಸೈನ್ಯದಲ್ಲಿದ್ದಾನೆ. ಹೆಂಡತಿ ಹತ್ತು ಹನ್ನೆರಡು ವರ್ಷದ ಮಗನೊಂದಿಗೆ ಊರಲ್ಲಿ ವಾಸವಾಗಿದ್ದಾಳೆ. ಪ್ರತಿ ತಿಂಗಳು ಗಂಡ ಹೆಂಡತಿಗೆ ಒಂದು ಪತ್ರ ಮತ್ತು ಒಂದಿಷ್ಟು ಹಣ ಮನಿ ಆರ್ಡರ್ ಮಾಡುತ್ತಾನೆ. ಪೋಸ್ಟ್‌ಮನ್ ಬಂದನೆಂದರೆ ಗಂಡನ ಪತ್ರ ಬಂತೆಂದೇ ಅರ್ಥ. ಆದರೆ ಅವಳಿಗೆ ಅಕ್ಷರ ಬರದು. ಹಾಗಾಗಿ ಮಗನೇ ಅವಳಿಗೆ ಪತ್ರವಕ್ತಾರ. ಗಂಡ ಗಡಿಯಲ್ಲಿ ಕೂತು ಬರೆದ ಸಾಲುಗಳನ್ನು ಮಗನ ಧ್ವನಿಯಲ್ಲಿ ಕೇಳಿ ಉಕ್ಕಿ ಬರುವ ದುಃಖವನ್ನು ತಡೆದುಕೊಂಡು ದಿನಗಳನ್ನು ದೂಡುತ್ತಾಳೆ. ಪತ್ರ ಓದಿ ಮುಗಿದ ಕೂಡಲೇ ಗಂಡ ಕಳುಹಿಸಿದ ಹಣದಲ್ಲಿ ಒಂದು ನೋಟನ್ನು ತೆಗೆದು ಮಗ ಬಂಟಿಗೆ ಕೊಡುವುದು ಯಾವತ್ತಿನ ವಾಡಿಕೆ. ಆ ಹಣವನ್ನು ಅವನು ಹುಂಡಿಯಲ್ಲಿ ಹಾಕಿ ಕೂಡಿಡುತ್ತಾನೆ.

ಹೀಗಿರುವಾಗ ಒಂದು ದಿನ ಪೋಸ್ಟ್‌ಮನ್ ಬಂದಾಗ ಮನೆಯಲ್ಲಿ ಅಮ್ಮ ಇರುವುದಿಲ್ಲ. ಮಗ ಒಬ್ಬನೇ ಇರುತ್ತಾನೆ. ಪೋಸ್ಟ್‌ಮನ್ ಅವನ ಕೈಗೇ ಪತ್ರವನ್ನು ಕೊಡುತ್ತಾನೆ. ಅದು ಗಂಡ ಗಡಿಯಿಂದ ಬರೆದು ಕಳಿಸಿದ ಪ್ರೀತಿ ತುಂಬಿದ ಪತ್ರವಲ್ಲ; ಅವನು ಗಡಿರಕ್ಷಣೆಯ ಕೆಲಸದಲ್ಲಿ ಜೀವತ್ಯಾಗ ಮಾಡಿದ್ದಾನೆ ಎಂದು ತಿಳಿಸುವ, ಸೇನೆಯಿಂದ ಬಂದಿರುವ ಮರಣವಾರ್ತೆ! ಅದನ್ನು ನೋಡಿ ಬಂಟಿ ಕಂಗಾಲಾಗುತ್ತಾನೆ; ದುಃಖಿತನಾಗುತ್ತಾನೆ. ಆದರೆ ಅಮ್ಮನಿಗೆ ಆ ಪತ್ರವನ್ನು ತೋರಿಸುವುದಿಲ್ಲ. ಬದಲಿಗೆ ತಾನೇ ಅದನ್ನು ತಿಂದುಹಾಕಿ, ಅಪ್ಪನ ಹೆಸರಲ್ಲಿ ತಾನೇ ಒಂದು ಪತ್ರವನ್ನು ಬರೆಯುತ್ತಾನೆ. ಅಷ್ಟು ದಿನ ಕೂಡಿಟ್ಟಿದ್ದ ಹುಂಡಿಯನ್ನು ಒಡೆದು ಅದರಲ್ಲಿನ ಹಣವನ್ನು ಅಪ್ಪನ ಹೆಸರಲ್ಲಿ ಅಮ್ಮನಿಗೆ ಮನಿ ಆರ್ಡರ್ ಮಾಡುತ್ತಾನೆ.

ದೇಶಪ್ರೇಮದ ಪಾನಕಕ್ಕೆ ಮುಗ್ಧ ಮಗುವಿನ ಪ್ರಬುದ್ಧತೆಯ ಭಾವುಕ ಸಕ್ಕರೆಯನ್ನೂ ಸೇರಿಸಿದ್ದಾರೆ ನಿರ್ದೇಶಕರು. ದೇಶಪ್ರೇಮ ಮತ್ತು ಸಣ್ಣ ಮಗು ಮಾಡುವ ಬಹುದೊಡ್ಡ ಕೆಲಸ ಹುಟ್ಟಿಸುವ ಭಾವುಕತೆ ಎರಡೂ ಸಿನಿಮಾ ಮಾಧ್ಯಮಗಳಲ್ಲಿ ಬಹುಸುಲಭವಾಗಿ ಗೆಲ್ಲಬಲ್ಲ ಕಥನದಾರಿಗಳೇಳು. ನಿರ್ದೇಶಕರು ಈ ಎರಡನ್ನೂ ಬೆರೆಸುವ ಕೆಲಸವನ್ನು ಇಲ್ಲಿ ಮಾಡಿದ್ದಾರೆ. ಸಿಖ್ ಸಮುದಾಯವನ್ನೇ ಈ ಕಥನಕ್ಕೆ ಆರಿಸಿಕೊಂಡಿದ್ದರ ಹಿಂದೆಯೂ ಇಂಥದ್ದೇ ಒಂದು ಸುಲಭ ಸೂತ್ರವೇ ಕಾಣಿಸುತ್ತದೆ.

ಒಟ್ಟಾರೆ ಇದು ಬಹುಜನರು ಬಳಸುವ ಹೆದ್ದಾರಿಯಲ್ಲಿ ಸುಲಭ ಸವಾರಿ ಮಾಡಿಸುವ ಕಿರುಚಿತ್ರ. ಹಾಗಾಗಿಯೇ ಇದನ್ನು ಒಮ್ಮೆ ನೋಡಿ ಕಣ್ಣಂಚಲ್ಲಿ ನೀರು ತರಿಸಿಕೊಳ್ಳಬಹುದು. ಅದರಾಚೆಗೆ ತಾರ್ಕಿಕವಾಗಿ ಗ್ರಹಿಸುವುದಕ್ಕೆ ಈ ಚಿತ್ರದ ಕ್ಯಾನ್ವಾಸಿನಲ್ಲಿಯೇ ಅವಕಾಶವಿಲ್ಲ; ಹಾಗೇನಾದರೂ ತರ್ಕದ, ಕೆಂಡದ ಮಡಿಕೆಯ (ಸಾವಿನ ಮನೆಯಲ್ಲಿ ಬಳಸುವ) ಹಾಗೆ ಅಸಂಗತವಾಗಿ ಕಾಣುತ್ತದೆ.



**ಹೆಸರು:** ಮೇರಿ ಪ್ರೀತು
**ನಿರ್ದೇಶನ:** ತಾನ್ಯಾ ಮಲಿಕ್
**ನಿರ್ಮಾಣ:** ಜೂನಿಪ್ ಎಂಟರ್‌ಟೈನ್ಮೆಂಟ್ ಪ್ರೈ.ಲಿ.
**ಸಂಕಲನ:** ಎಸ್‌.ಬಿ. ಉದ್ಧವ್
**ಸಂಗೀತ:** ಏಂಜಲ್ ರೋಮನ್
**ಛಾಯಾಗ್ರಹಣ:** ಶ್ರೀರಾಮ್ ಗಣಪತಿ
**ತಾರಾಗಣ:** ಫೆರ್ಯಾನ್ ವಾಜಿಮನ್, ಖುಷಮತ್ ಗಿಲ್, ಶಿವಕುಮಾರ್

ಈ ಕಿರುಚಿತ್ರ ವೀಕ್ಷಣೆಗೆ http://bit.ly/2ZtDsxs ಕೊಂಡಿ / ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.